ಮನೆಗೆ ಕರೆತಾರದ ಹಾಗಾದರೆ ಅಮ್ಮನಿಗೆ ಏನು ಹೇಳುವುದು? ಮಿಹಿರ ತಳಮಳಿಸಿದ. ಇಂತಹುದೊಂದು ಸಂದರ್ಭ ಬರುತ್ತದೆಂದು ಗೊತ್ತಿದ್ದರೆ ನಾನು ಅಪ್ಪನ ಮಾತು ಕೇಳಿಯೇ ಬಿಡುತ್ತಿದ್ದೆನಲ್ಲ. ನಿಜ, ಇಲ್ಲಿ ನೆಲ ಸೂರು ಯಾವುದೂ ಇಲ್ಲ, ಇದ್ದರೂ ಬೆಲೆಯಿಲ್ಲ. ಈಗೇನು ಮಾಡುವುದು? ನೆಂಟರಿಲ್ಲವೆಂದಲ್ಲ, ಆದರೆ ಹೇಗೆ ಅವರನ್ನು ಕೇಳುವುದು? ಅಪ್ಪನಿಗೆ ಕೊನೆಯದಾಗಿ ಒಂದಷ್ಟು ಹೊತ್ತು ಒಂಚೂರು ನೆಲ ಕೊಡಿ ಎಂದು? ಅಂತಿಮ ಯಾನದಲ್ಲಿ ಅಪ್ಪನಿಗೆ ಈ ಅವಮಾನ... ಸ್ವಾಭಿಮಾನಿ ಅಪ್ಪನ ಆತ್ಮ ಎನ್ನುವುದಿದ್ದರೆ ಅದೆಷ್ಟು ನೊಂದೀತೊ? ಅಮ್ಮನಿಗೆಷ್ಟು ನೋವಾಗಲಿಕ್ಕಿಲ್ಲ? ತಾನು ಕೇಳುವುದು ಅವರು ನಿರಾಕರಿಸುವುದು... ಮುಖ ಕೆಡುವುದು...

ಮಿಹಿರ ಮನದಲ್ಲೇ ತೀರ್ಮಾನಿಸಿದ. ಅಮ್ಮನನ್ನು ಹೇಗಾದರೂ ಮಾಡಿ ಒಪ್ಪಿಸುವುದು. ನೊಂದರೂ ಬಹಳ ಪ್ರಾಕ್ಟಿಕಲ್ ಆಗಿ ಯೋಚಿಸುತ್ತಾಳಾದ್ದರಿಂದ ಅಷ್ಟು ಕಷ್ಟ ಆಗಲಿಕ್ಕಿಲ್ಲ. ಬೇರೆ ದಾರಿಯೇ ಇಲ್ಲ ಎನಿಸಿ ಮೊಬೈಲ್ ಮೇಲೆ ಬೆರಳಾಡಿಸಿ ಕಿವಿಗಿಟ್ಟ. ರಾಶಿ

